<u>ಸಾಕ್ಷಿಯನ್ನು ದಿಃ**26.07.2023** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ ವಾದಿಗಳ ಪರ ಶ್ರೀ ಎಸ್ ಎ ಆರ್ ವಕೀಲರಿಂದಃ</u>**

ನನ್ನ ತಾತ ಅಪ್ಪಾ ಬೋವಿಗೆ ಇಬ್ಬರು ಮಕ್ಕಳು ಅವರ ಹೆಸರು ಈರಾಬೋವಿ ಮತ್ತು ತಿಮ್ಮಾಬೋವಿ ಎಂದರೆ ನಿಜ. ಈರಾಬೋವಿಗೆ ಯಾರು ಮಕ್ಕಳಿಲ್ಲ. ಆತ ನಷ್ಟ ಸಂತತಿ. ನನ್ನ ತಾತ ಅಪ್ಪಾಬೋವಿಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ. ಅಪ್ಪಾಬೋವಿಯ ಇಬ್ಬರು ಮಕ್ಕಳು ತಂದೆಯ ಜೊತೆ ಒಟ್ಟು ಕುಟುಬಂದಲ್ಲಿ ವಾಸ ಮಾಡುತ್ತಿದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ತಾತ ಅಪ್ಪಾ ಬೋವಿ ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ . ಏಕೆಂದರೆ ನಾನು ಆಗ ಹುಟ್ಟಿರಲಿಲ್ಲ. ನನ್ನ ತಂದೆಯ ಮತ್ತು ದೊಡ್ಡಪ್ಪ ಪೈಕಿ ಪುಟ್ಟಾಬೋವಿ ಮೃತಪಟ್ಟಿದ್ದಾರೆ. ನನ್ನ ತಂದೆ ಅಂದಾಜು 50 ವರ್ಷ ಹಿಂದೆಯೇ ಮೃತಪಟ್ಟಿದ್ದಾನೆ. ಈರಾ ಬೋವಿ ನನ್ನ ತಂದೆಯ ನಂತರ ಮೃತಪಟ್ಟಿದ್ದು ಯಾವ ಇಸವಿ ಎಂದು ನನಗೆ ಗೊತ್ತಿಲ್ಲ. ಈರಾಬೋವಿ ಮತ್ತು ಪುಟ್ಟಾಬೋವಿ ಒಟ್ಟು ಕುಟುಂಬದ ಸದಸ್ಯರಾಗಿದ್ದು ಈರಾಬೋವಿ ಹಿರಿಯ ಸದಸ್ಯನಾಗಿದ್ದರಿಂದ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಅವರಿಬ್ಬರೂ ಬೇರೆ ಬೇರೆಯಾಗಿದ್ದಾರೆಂದು ಹೇಳುತ್ತಾರೆ ಆದರೆ ಯಾವ ವರ್ಷದಲ್ಲಿ ಬೇರೆ ಬೇರೆಯಾಗಿದ್ದರು ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಈರಾಬೋವಿ ಸಾಯುವವರೆಗೆ ವ್ಯವಸಾಯ ಮಾಡುತ್ತಿದ್ದ ಎನ್ನುವುದು ನಿಜ.

2. ವಾದಿ ಈ ದಾವೆಯಲ್ಲಿ ಯಾವ ಯಾವ ಆಸ್ತಿಗಳ ಮೇಲೆ ಏನು ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ತಿಳಿದಿದೆ. ಸರ್ವೆ ನಂ.223/ಪಿ5 ಅಂದರೆ 1 ನೇ ಐಟಂ ಆಸ್ತಿ ಮೂಲತಃ ನನ್ನ ತಾಯಿ ತಿಮ್ಮಕ್ಕನಿಗೆ ಸೇರಿತ್ತು. ನಂತರ ನಾನು ಮತ್ತು ನನ್ನ ತಮ್ಮ ವಿಭಾಗ ಮಾಡಿಕೊಂಡಿದ್ದೇವೆ. ಸದರಿ ಜಮೀನು ನನ್ನ ತಂದೆಯಿಂದ ನನ್ನ ತಾಯಿಗೆ ಬಂತು.

ಸರ್ವೆನಂ.483 ಒಂದು ಎಕರೆ 17 ಗುಂಟೆ ಜಮೀನು ಇದು ನನ್ನ ತಂದೆಗೆ ಸೇರಿದ ಜಮೀನು ಆಗಿತ್ತು. ಸಾಕ್ಷಿಯು ಮುಂದುವರೆದು ಸರ್ವೆ ನಂ. 483 ರಲ್ಲಿ ನನ್ನ ತಂದೆ ಮತ್ತು ಅವರ ಅಣ್ಣ ಈರಾಬೋವಿ ತಲಾ ಅರ್ಧ ಭಾಗ ಮಾಡಿಕೊಂಡಿದ್ದರು ಎಂದು ಹೇಳುತ್ತಾರೆ. ಆದರೆ ಸದರಿ ಪಾಲನ್ನು ದಾಖಲೆಯ ಮೂಲಕ ಮಾಡಿಕೊಂಡಿಲ್ಲ.

**ನ್ಯಾಯಾಲಯದ ಪೂರ್ವಾರ್ಹ್ನದ ಸಮಯ ಮುಗಿದಿದ್ದರಿಂದ ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಆಲಿಸಿ ನೀಡಲಾಯಿತು**.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.